**ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಸಮಗ್ರ ಪೌಷ್ಠಿಕ ಅಭಿಯಾನದಡಿ ಪ್ರಾಯೋಗಿಕ ಕಾರ್ಯಕ್ರಮಗಳ ಅನುಷ್ಠಾನ ಕುರಿತು ನಡೆದ ಮೊದಲ ಉನ್ನತ ಮಟ್ಟದ ಸಮಿತಿ ಸಭೆಯ ನಡವಳಿಗಳು:**

**ದಿನಾಂಕ: 06-12-2014 ರಂದು ಸಂಜೆ 5.00 ಗಂಟೆಗೆ**
**ಸ್ಥಳ : ಕೊಠಡಿ ಸಂಖ್ಯೆ: 329, ವಿಧಾನ ಸೌಧ, ಬೆಂಗಳೂರು.**

ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು/ಆಹ್ವಾನಿತರು

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು, ಕರ್ನಾಟಕ ಸರ್ಕಾರ – ಸಭಾಧ್ಯಕ್ಷರು
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
3. ಸಲಹೆಗಾರರು, ಕರ್ನಾಟಕ ಸಮಗ್ರ ಪೌಷ್ಟಿಕ ಅಭಿಯಾನ (KCNM)
4. ಅಭಿಯಾನ ನಿರ್ದೇಶಕರು, ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್
5. ಅಪರ ಅಭಿಯಾನ ನಿರ್ದೇಶಕರು, ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್

1. **ಪ್ರಾರಂಭದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು** ಕರ್ನಾಟಕ ಸಮಗ್ರ ಪೌಷ್ಠಿಕ ಅಭಿಯಾನದಡಿ ಪ್ರಾಯೋಗಿಕ ಕಾರ್ಯಕ್ರಮಗಳ ಅನುಷ್ಠಾನ ಕುರಿತು ಮೊದಲ ಉನ್ನತ ಮಟ್ಟದ ಸಮಿತಿ ಸಭೆಯ ಅಧ್ಯಕ್ಷತೆಯನ್ನು ವಹಿಸಲು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರನ್ನು ಆಹ್ವಾನಿಸಿ, ಸಭೆಯನ್ನು ನಡೆಸಿಕೊಡಲು ಕೋರಿದರು. ಈ ಕಾರ್ಯಕ್ರಮವನ್ನು "ಸಂಜೀವಿನಿ"-ಕೆಎಸ್‌ಆರ್‌ಎಲ್‌ಪಿಎಸ್ ಅಡಿ ಅನುಷ್ಠಾನಗೊಳಿಸುತ್ತಿರುವ ಬಗ್ಗೆ ತಿಳಿಸುತ್ತಾ, ಈ ಯೋಜನೆಯ ಹಿನ್ನೆಲೆ, ಪ್ರಾಮುಖ್ಯತೆ ಬಗ್ಗೆ ಮಾನ್ಯ ಸಚಿವರಿಗೆ ವಿವರಿಸಿದರು. ಈ ಯೋಜನೆಯನ್ನು ಕರ್ನಾಟಕ ರಾಜ್ಯದಲ್ಲಿ ಅತ್ಯಂತ ಹಿಂದುಳಿದ ಪ್ರದೇಶಗಳಲ್ಲಿ ಅವಶ್ಯಕತೆ ಇರುವ ತುಂಬಾ ದುರ್ಬಲ ಮಕ್ಕಳ ಬೆಳವಣಿಗೆಗೆ ಅಂದರೆ 6 ತಿಂಗಳಿಂದ 3 ವರ್ಷದ ಮಕ್ಕಳಿಗೆ, ಪ್ರಾಯದ ಹೆಣ್ಣು ಮಕ್ಕಳಿಗೆ (11 ರಿಂದ 18 ವರ್ಷದವರು), ಗರ್ಭಿಣಿಯರು ಮತ್ತು ಬಾಣಂತಿಯರು (ಹಾಲುಣಿಸುವ ತಾಯಂದಿರು) ಪೌಷ್ಠಿಕತೆಯನ್ನು ಹೆಚ್ಚಿಸಲು, ಅವರುಗಳ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಿ ಆ ಮೂಲಕ ಮಕ್ಕಳ ಹಾಗೂ ತಾಯಂದಿರ ಮರಣ ಪ್ರಮಾಣವನ್ನು ತಗ್ಗಿಸಲು ಸಾಧ್ಯವಾಗುವ ಬಗ್ಗೆ ವಿವರಿಸಿದರು.

2. **ಕರ್ನಾಟಕ ರಾಜ್ಯ ಸಮಗ್ರ ಪೌಷ್ಟಿಕ ಅಭಿಯಾನದ ಸಲಹೆಗಾರರು** ಈ ಯೋಜನೆಯ ಪೂರ್ಣ ಚಿತ್ರಣವನ್ನು ಅಂದರೆ ಈ ಅಭಿಯಾನದ ಪ್ರಾರಂಭ, ಯಾವ ರೀತಿ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ ಎಂಬುದನ್ನು ಪವರ್‌ಪಾಯಿಂಟ್ ಮೂಲಕ ವಿವರಿಸಿದರು. ಪ್ರತೀ ವ್ಯಕ್ತಿಯ ವಾರ್ಷಿಕ ಆದಾಯ ದರವು ಹೆಚ್ಚಾಗಿದ್ದರೂ ಸಹಾ ಸಾರ್ವಜನಿಕರಲ್ಲಿ ವಿಶೇಷವಾಗಿ ಮಕ್ಕಳು ಮತ್ತು ಮಹಿಳೆಯರ ಅಪೌಷ್ಠಿಕತೆ ಮತ್ತು ರಕ್ತ

ಹೀನತೆ ಗಣನೀಯವಾಗಿ ಕಡಿಮೆಯಾಗದಿರುವ ಬಗ್ಗೆ ತಿಳಿಸಿದರು. ಮಾನ್ಯ ಮುಖ್ಯ ಮಂತ್ರಿಗಳು ೨೦೧೦ರ ತಮ್ಮ ಆಯವ್ಯಯ ಭಾಷಣದಲ್ಲಿ ಕರ್ನಾಟಕ ಸಮಗ್ರ ಪೌಷ್ಠಿಕ ಅಭಿಯಾನವನ್ನು ಪ್ರಾಯೋಗಿಕವಾಗಿ ತುಮಕೂರು ಜಿಲ್ಲೆಯ ಗುಬ್ಬಿ ಹಾಗೂ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಿಸಲು ಪ್ರಸ್ತಾಪಿಸಿರುತ್ತಾರೆ.

ಸಲಹೆಗಾರರು, ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಿಗೆ ಸಮಗ್ರ ಪೌಷ್ಠಿಕ ಅಭಿಯಾನವನ್ನು ಪ್ರಾಯೋಗಿಕವಾಗಿ ಅನುಷ್ಠಾನ ಗೊಳಿಸಲು ರೂಪಿಸಿರುವ ಕಾರ್ಯತಂತ್ರಗಳ ಬಗ್ಗೆ ವಿವರಿಸುತ್ತಾ ಹಿಂದಿಗಿಂತ ಈಗಿನ ಜನರ ಜೀವನ ಶೈಲಿ, ಆಹಾರ ಪದ್ಧತಿ, ಪೌಷ್ಠಿಕತೆಯ ಕೊರತೆ ಬಗ್ಗೆ ವಿವರಿಸಿದರು. ಗ್ರಾಮೀಣ ಬಡಜನರ ಕುಟುಂಬಗಳ ಶಿಶುಗಳಲ್ಲಿ, ಮಕ್ಕಳಲ್ಲಿ, ಪ್ರಾಯದ ಹೆಣ್ಣು ಮಕ್ಕಳಲ್ಲಿ, ಗರ್ಭಿಣಿಯರಲ್ಲಿ ಹಾಗೂ ಬಾಣಂತಿಯರಲ್ಲಿ (ಹಾಲುಣಿಸುವ ತಾಯಂದಿರು) ಇರುವ ಅಪೌಷ್ಠಿಕತೆಯನ್ನು ಹೋಗಲಾಡಿಸಲು ಮಹಿಳಾ ಸ್ವಸಹಾಯ ಗುಂಪುಗಳ ಮೂಲಕ ಪೌಷ್ಠಿಕ ಆಹಾರ ತಯಾರಿಸುವುದು, ಗ್ರಾಮೀಣ ಬಡ ಜನರಿಗೆ ಅದರಲ್ಲೂ ಮಹಿಳೆಯರಿಗೆ ಮತ್ತು ಮಕ್ಕಳಿಗೆ ಸ್ವಚ್ಛ ಕುಡಿಯುವ ನೀರು, ಕಲುಶಿತವಾಗಿರದ ನೀರಿನ ಬಳಕೆ ಬಗ್ಗೆ, ದಿನನಿತ್ಯದ ಬದುಕಿನಲ್ಲಿ ನೈರ್ಮಲ್ಯತೆಯನ್ನು ಹೇಗೆ ಕಾಪಾಡಿಕೊಳ್ಳಬೇಕು ಎನ್ನುವುದರ ಬಗ್ಗೆ ಅರಿವು ಕಾರ್ಯಕ್ರಮಗಳನ್ನು ಏರ್ಪಡಿಸಿ, ಈ ಬಗ್ಗೆ ಅವರ ಜ್ಞಾನವನ್ನು ಹೆಚ್ಚಿಸಲು ಕ್ರಮಗಳನ್ನು ವಹಿಸಲಾಗುವ ಬಗ್ಗೆ ತಿಳಿಸಿದರು. ಇದರಿಂದ ಗ್ರಾಮೀಣ ಜನರ ಆರೋಗ್ಯ ಮತ್ತು ಪೌಷ್ಠಿಕತೆಯನ್ನು ಸುಧಾರಿಸಬಹುದಾಗಿರುವುದನ್ನು ತಿಳಿಸಿದರು. ಕುಟುಂಬದಲ್ಲಿರುವ ಆದಾಯದಿಂದಲೇ ಮಕ್ಕಳ ಮತ್ತು ತಾಯಿಯ ಆರೈಕೆಯನ್ನು ಸರಿಯಾದ ಪೋಷಣೆಯನ್ನು ನೀಡುವ ಬಗ್ಗೆ ನಿರಂತರವಾಗಿ ಸಾರ್ವಜನಿಕರಿಗೆ ಅದರಲ್ಲೂ ಬೇರು ಮಟ್ಟದಲ್ಲಿರುವವರಿಗೆ ವಿವಿಧ ಮಾಧ್ಯಮ ಹಾಗೂ ಪರಸ್ಪರ ಸಂವಹನದ ಮೂಲಕ ಜಾಗೃತಿಯನ್ನು ಮೂಡಿಸಿ, ಸರ್ಕಾರದ ಕಾರ್ಯಕ್ರಮಗಳಿಗೆ ಬೇಡಿಕೆ ಹೆಚ್ಚಿಸಲು ಕ್ರಮ ವಹಿಸುವುದಾಗಿ ತಿಳಿಸಿದರು.

ಆರೋಗ್ಯ ಮತ್ತು ಪೌಷ್ಠಿಕತೆ ಮಟ್ಟವು ನಿಗದಿ ಪಡಿಸಿದ ಗುಂಪುಗಳಲ್ಲಿ (೦-೩ ವರ್ಷದ ಮಕ್ಕಳು, ಪ್ರಾಯದ ಹೆಣ್ಣು ಮಕ್ಕಳು ಹಾಗೂ ಗರ್ಭಿಣಿ ಹಾಗೂ ಬಾಣಂತಿಯರು (ಹಾಲುಣಿಸುವ ತಾಯಂದಿರು) ಸಮಗ್ರ ಪೌಷ್ಠಿಕ ಅಭಿಯಾನ ಕಾರ್ಯಕ್ರಮಗಳಿಂದ ಗ್ರಾಮೀಣ ಬಡ ಜನರ ಅದರಲ್ಲೂ ವಿಶೇಷವಾಗಿ ಮಕ್ಕಳ ಮತ್ತು ತಾಯಂದಿರ ಪೌಷ್ಠಕತೆ ಮಟ್ಟ ಮತ್ತು ಆರೋಗ್ಯ ಮಟ್ಟ ಸುಧಾರಿಸಿ ಮರಣ ಪ್ರಮಾಣವು ಗಣನೀಯವಾಗಿ ಕಡಿಮೆಯಾಗುತ್ತಿರುವುದನ್ನು ಗಮನಿಸಲಾಗಿರುವ ಬಗ್ಗೆ ಸಲಹೆಗಾರರು ಮಾನ್ಯ ಸಚಿವರ ಗಮನಕ್ಕೆ ತಂದರು. ಈ ಯೋಜನೆಯ ಕಾರ್ಯಕ್ರಮಗಳಿಂದ ಕಡಿಮೆ ತೂಕದ ಶಿಶುಗಳ ಜನನ ಪ್ರಮಾಣ

ಶೇ.8 ರಿಂದ ಶೇ.5ಕ್ಕೆ ಇಳಿದಿದೆ. ಶಿಕ್ಷಣ, ಮಾಹಿತಿ ಮತ್ತು ಸಂಪರ್ಕ ಮಾರ್ಗಗಳ ಮೂಲಕ ವಿವಿದ ಉಪಯುಕ್ತ ಮಾಹಿತಿಗಳನ್ನು ನಿರಂತರವಾಗಿ ಸಾರ್ವಜನಿಕರಿಗೆ ಅದರಲ್ಲೂ ಬೇರು ಮಟ್ಟದಲ್ಲಿರುವವರ ಗಮನಕ್ಕೆ ತರುವಂತೆ ಮಾಡಿ, ಸಮಗ್ರ ಪೌಷ್ಠಿಕತೆಯ ಅವಶ್ಯಕತೆ ಹೆಚ್ಚಿಸಿಕೊಳ್ಳುವ ರೀತಿ ಅವರ ಜೀವನ ಶೈಲಿ ರೀತಿ ನೀತಿಗಳನ್ನು ಬದಲಾಯಿಸಿಕೊಳ್ಳುವ ಬಗ್ಗೆ ಅರಿವು ಮೂಡಿಸುವ ಕಾರ್ಯಗಳನ್ನು ಹಮ್ಮಿಕೊಂಡಿರುವುದನ್ನು ಗಮನಕ್ಕೆ ತರಲಾಯಿತು.

ಮೇಲಿನ ವಿವಿದ ರೀತಿಯ ಕಾರ್ಯತಂತ್ರಗಳ ಯಶಸ್ಸನ್ನು ಗಮನಿಸಿ, ಸದರಿ ಯೋಜನೆಯ ಅನುಷ್ಠಾನಕ್ಕೆ ವಿಶ್ವಬ್ಯಾಂಕ್‌ನಿಂದ US $5 ಮಿಲ್ಲಿಯನ್ ಡಾಲರ್ ಅನುದಾನವನ್ನು ಕರ್ನಾಟಕ ರಾಜ್ಯದ ಗುಲ್ಬರ್ಗ ಜಿಲ್ಲೆಯ ಚಿಂಚೋಳಿ ಮತ್ತು ರಾಯಚೂರು ಜಿಲ್ಲಯ ದೇವದುರ್ಗ ತಾಲ್ಲೂಕುಗಳಲ್ಲಿ ಸದರಿ ಯೋಜನೆಯನ್ನು ಅನುಷ್ಠಾನಗೊಳಸಲು ನೀಡಲಾಗಿದೆ.

ಕರ್ನಾಟಕ ಸಮಗ್ರ ಪೌಷ್ಠಕತೆ ಅಭಿಯಾನದಡಿ ಜಪಾನ್ ಸೋಷಿಯಲ್ ಡೆವಲಪ್‌ಮೆಂಟ್ ಗ್ರ್ಯಾಂಟ್ (JSDF)ನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮೂಲಕ ಸದರಿ ಪ್ರಾಯೋಗಿಕ ಯೋಜನೆ ಚಿಂಚೋಳಿ ಮತ್ತು ದೇವದುರ್ಗ ತಾಲ್ಲೂಕುಗಳಲ್ಲೂ ಖರ್ಚು ಮಾಡಲು ದಿನಾಂಕ 12-12-2013 ರಂದು ಕರ್ನಾಟಕ ಸರ್ಕಾರದ ಸಚಿವ ಸಂಪುಟದ ಅನುಮೋದನೆ ಪಡೆದುಕೊಂಡಿರುವ ಬಗ್ಗೆಯೂ ಸಭೆಯ ಗಮನಕ್ಕೆ ತಂದರು.

2 ತಾಲ್ಲೂಕುಗಳಲ್ಲಿರುವ ಎಲ್ಲಾ 421 ಗ್ರಾಮಗಳಲ್ಲಿನ ಬಡತನ ರೇಖೆಗಿಂತ ಕೆಳಗಿರುವ 3 ವರ್ಷದೊಳಗಿನ ಮಕ್ಕಳು, ಪ್ರಾಯದ ಹೆಣ್ಣು ಮಕ್ಕಳು (11-18 ವರ್ಷದವರು), ಗರ್ಭಿಣಿಯರು ಮತ್ತು ಬಾಣಂತಿಯರು (ಹಾಲುಣಿಸುವ ತಾಯಂದಿರು) ಈ ಸವಲತ್ತುಗಳನ್ನು ನೀಡಲಾಗುವುದು. ಚಿಂಚೋಳಿಯಲ್ಲಿ 17457 ಫಲಾನುಭವಿಗಳನ್ನು ಹಾಗೂ ದೇವದುರ್ಗ ತಾಲ್ಲೂಕಿನಲ್ಲಿ ಒಟ್ಟು 18825 ಫಲಾನುಭವಿಗಳಿಗೆ ಸದರಿ ಸವಲತ್ತುಗಳನ್ನು ನೀಡಲಾಗುವುದು ಮತ್ತು ಈ ಯೋಜನೆಯು ಜುಲೈ 2014 ರಿಂದ ಜುಲೈ 2017ರವರೆಗೆ ಕಾರ್ಯಾಚರಣೆಯಲ್ಲಿರುತ್ತದೆ ಎಂದು ತಿಳಿಸಿದರು.

ಗುಣಮಟ್ಟದ ನೀರಿನ ಬಳಕೆ, ಸ್ವಚ್ಛತೆ, ಆರೋಗ್ಯ, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿಗೆ ಸಂಬಂಧಿಸಿದ ವಿವಿಧ ಕಾರ್ಯತಂತ್ರಗಳನ್ನು ಜೊತೆ ಜೊತೆಯಾಗಿ ಕಾರ್ಯಗತಗೊಳಸುವ ಬಗ್ಗೆ, ಸಲಹೆಗಾರರು (KCNM) ವಿವರಿಸಿದರು. ಈ ಉದ್ದೇಶಕ್ಕೋಸ್ಕರ ಈ ಯೋಜನೆಯನ್ನು ಗ್ರಾಮೀಣಾಭಿವೃದ್ಧಿ

ಮತ್ತು ಪಂಚಾಯತ್ ರಾಜ್ ಇಲಾಖೆ ಮೂಲಕವೇ ಅನುಷ್ಠಾನಗೊಳಿಸಲಾಗುತ್ತಿದ್ದು, ಈ ಇಲಾಖೆಯ ಕೇಂದ್ರ ಸ್ಥಾನಗಳಾದ ಜಿಲ್ಲಾ ಪಂಚಾಯತ್‌ಗಳು ಈ ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ಒಗ್ಗೂಡಿಸುವಿಕೆಗೆ ತುಂಬಾ ಸಹಕಾರಿಯೊಂದಿಗೆ ಅದರಲ್ಲೂ ವಿಶೇಷವಾಗಿ ನೀರು ಮತ್ತು ನೈರ್ಮಲ್ಯದ ಬಗ್ಗೆ ಹಳ್ಳಿಗಳಲ್ಲಿ ಅರಿವು ಮೂಡಿಸುವಲ್ಲಿ ಸಹಕಾರಿಯಾಗಲಿವೆ.

ಕರ್ನಾಟಕ ಸಮಗ್ರ ಪೌಷ್ಠಿಕ ಅಭಿಯಾನದ ಸಲಹೆಗಾರರು ಮಾನ್ಯ ಸಚಿವರಿಗೆ ಗುಬ್ಬಿ ಮತ್ತು ಶಿಕಾರಿಪುರ ತಾಲ್ಲೂಕುಗಳಲ್ಲಿ ಸದರಿ ಅಭಿಯಾನದ ಪ್ರಗತಿ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿದರು.

3. **ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ಅಭಿಯಾನ ನಿರ್ದೇಶಕರು** ದಿನಾಂಕ 12-12-2012 ರಂದು ಸದರಿ ಯೋಜನೆಯ ಅನುಷ್ಠಾನಕ್ಕೆ ಸಚಿವ ಸಂಪುಟದ ಅನುಮೋದನೆ ಪಡೆದುಕೊಂಡ ದಿನದಿಂದ ಈವರೆಗೆ ಈ ಯೋಜನೆಯಡಿಯಲ್ಲಿ ಆಗಿರುವ ಪ್ರಗತಿ ಬಗ್ಗೆ ವಿವರಿಸಿದರು.

ಸದರಿ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಸೂಕ್ತ ಮಾರ್ಗದರ್ಶನ ನೀಡಲು ದಿನಾಂಕ 04-03-2014 ಮತ್ತು 05-03-2014 ಗಳಂದು ಗುಲ್ಬರ್ಗ ಮತ್ತು ರಾಯಚೂರು ಜಿಲ್ಲೆಯ ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳಿಗೆ ಪ್ರಾರಂಭಿಕ ಕಾರ್ಯಾಗಾರವನ್ನು NIPCCD (National Institute of Public Cooperation and Child Development), ಬೆಂಗಳೂರು ಆವರಣದಲ್ಲಿ ಏರ್ಪಡಿಸಲಾಗಿತ್ತು. ಕಾರ್ಯಾಗಾರದಲ್ಲಿ ಯೋಜನೆಯ ಉದ್ದೇಶ, ಪ್ರಾಮುಖ್ಯತೆ ಮತ್ತು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಅನುಸರಿಸಬೇಕಾದ ಕ್ರಮಗಳ ಬಗ್ಗೆ ತಿಳಿಸಲಾಯಿತು.

ಸದರಿ ಯೋಜನೆಯ ಅನುಷ್ಠಾನಕ್ಕೆ ವಿಶ್ವಬ್ಯಾಂಕ್‌ನಿಂದ ಬಿಡುಗಡೆಯಾದ ಅನುದಾನ ಸಂಬಂಧ ಆರ್ಥಿಕ ವ್ಯವಹಾರಗಳನ್ನು ನಿರ್ವಹಿಸಲು ಹೊಸ ಲೆಕ್ಕಶೀರ್ಷಿಕೆ "2236-08-800-0-02, Rapid Response to Food Prices & Malnutrition (JSDF)ನ್ನು ಆರ್ಥಿಕ ಇಲಾಖೆ ಕರ್ನಾಟಕ ಸರ್ಕಾರವು ದಿನಾಂಕ 22-05-2014 ರಂದು ನೀಡಿರುವ ಬಗ್ಗೆ ತಿಳಿಸಿದರು.

ಭಾರತ ಸರ್ಕಾರದ ಆರ್ಥಿಕ ವ್ಯವಹಾರಗಳ ಇಲಾಖೆಯು ದಿನಾಂಕ 15-07-2014 ರಂದು ವಿಶ್ವಬ್ಯಾಂಕ್‌ನೊಂದಿಗೆ ಒಪ್ಪಂದಕ್ಕೆ ಸಹಿ ಮಾಡಲಾಗಿರುವ ಬಗ್ಗೆ ಸಭೆಯ ಗಮನಕ್ಕೆ ತಂದರು.

ಪ್ರಾಯೋಗಿಕ ಯೋಜನೆಯ ಅನುಷ್ಠಾನಕ್ಕಾಗಿ ಆಸಕ್ತಿ ಹೊಂದಿರುವ ಸರ್ಕಾರೇತರ ಸಂಸ್ಥೆಗಳಿಂದ Expression of Interestನ್ನು ದಿನಾಂಕ 15-5-2014ರಂದು ಆಹ್ವಾನಿಸಲಾಯಿತು ಮತ್ತು ಆಯ್ಕೆಯಾದ 7 ಸರ್ಕಾರೇತರ ಸಂಸ್ಥೆಗಳಿಗೆ ದಿನಾಂಕ 04-09-2014 ರಂದು RFP(Request for Proposal)ಯನ್ನು ನೀಡಲಾಯಿತು.

ವಿಶ್ವಬ್ಯಾಂಕ್ ತಂಡದ ನಾಯಕರು ಗುಬ್ಬಿ ತಾಲ್ಲೂಕಿನಲ್ಲಿ ಅನುಷ್ಠಾನದಲ್ಲಿರುವ ಕರ್ನಾಟಕ ಸಮಗ್ರ ಪೌಷ್ಟಕತೆ ಅಭಿಯಾನ ಪ್ರಾಯೋಗಿಕ ಕ್ಷೇತ್ರಗಳಿಗೆ ದಿನಾಂಕ 10-09-2014 ರಂದು ಭೇಟಿ ನೀಡಿ, ಸದರಿ ಯೋಜನೆಯ ಅನುಷ್ಠಾನದ ಬಗ್ಗೆ ತೃಪ್ತಿ ವ್ಯಕ್ತಪಡಿಸಿದ್ದಲ್ಲದೆ, ಫಲಾನುಭವಿಗಳಲ್ಲಿ ಹೆಚ್ಚಿರುವ ಪೌಷ್ಟಿಕತೆ ಅಭಿವೃದ್ಧಿಯ ಬಗ್ಗೆ ತಿಳಿಸಿದರು. ವಿಶ್ವಬ್ಯಾಂಕ್ ತಂಡದವರು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಅಭಿಯಾನ ನಿರ್ದೇಶಕರು, ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ರವರು ಮತ್ತು ಯೋಜನೆಯ ಸಲಹೆಗಾರರೊಂದಿಗೆ ದಿನಾಂಕ 11-09-2014 ರಂದು ಸಭೆ ನಡೆಸಿ ಯೋಜನೆಯ ಚಟುವಟಿಕೆಗಳ ಅನುಷ್ಠಾನಗೊಳಿಸಲು ನಿಗದಿ ಪಡಿಸಿರುವ ಅವಧಿ ಬಗ್ಗೆಯೂ ಸಭೆಯ ಗಮನಕ್ಕೆ ತಂದರು.

ದಿನಾಂಕ 28-11-2014ರ ತಾಂತ್ರಿಕ ಮೌಲ್ಯ ನಿರ್ಧಾರಣ ವರದಿಗೆ ದಿನಾಂಕ 02-12-2014 ರಂದು ವಿಶ್ವ ಸಂಸ್ಥೆಯವರು ಅನುಮೋದನೆ ನೀಡಿದ್ದು, ಕರ್ನಾಟಕ ಆರೋಗ್ಯ ಸಂವರ್ಧನ ಪ್ರತಿಷ್ಠಾನ (Karnataka Health Promotion Trust), ಬೆಂಗಳೂರು ಮತ್ತು ಮೈರಾಡಾ ಸಂಸ್ಥೆಗಳ ಆರ್ಥಿಕ ಬಿಡ್‌ಗಳನ್ನು ಇ-ಪೋರ್ಟಲ್‌ನಿಂದ ತೆರೆಯಲು ಶಿಫಾರಸ್ಸು ಮಾಡಿರುವ ಬಗ್ಗೆಯೂ ಅಭಿಯಾನ ನಿರ್ದೇಶಕರು, ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ಸಭೆಗೆ ತಿಳಿಸಿದರು.

ದಿನಾಂಕ 03-12-2014 ರಂದು ಕೆಹೆಚ್‌ಪಿಟಿ ಮತ್ತು ಮೈರಾಡಾ ಸಂಸ್ಥೆಗಳ ಆರ್ಥಿಕ ಬಿಡ್ಡನ್ನು ತೆರೆದ ಬಗ್ಗೆ ಹಾಗೂ ದಿನಾಂಕ 05-12-2014 ರಂದು ಆರ್ಥಿಕ ಮೌಲ್ಯ ಪರಿಶೀಲನೆ ಮತ್ತು ಸರ್ಕಾರೇತರ ಸಂಸ್ಥೆಯನ್ನು ಆಯ್ಕೆ ಮಾಡಲು ಸಭೆ ನಡೆಸಿ, ಈ ಸಭೆಯ ನಡವಳಿಯನ್ನು ವಿಶ್ವಬ್ಯಾಂಕ್ ತಂಡದ ನಾಯಕರಿಗೆ ಅನುಮೋದನೆಗೆ ಸಲ್ಲಿಸಿದ್ದು, ಆಯ್ಕೆಯಾದ ಸರ್ಕಾರೇತರ ಸಂಸ್ಥೆಯೊಂದಿಗೆ ಒಪ್ಪಂದಕ್ಕೆ ಸಹಿ ಮಾಡಲಾಗುವುದು ಎಂದು ತಿಳಿಸಿದರು.

ಯೋಜನೆಯ ಮೊದಲನೇ ವರ್ಷಕ್ಕೆ (4 ತ್ರೈಮಾಸಿಕ) ದೇವದುರ್ಗ ಮತ್ತು ಚಿಂಚೋಳಿ ತಾಲ್ಲೂಕುಗಳಿಗೆ ನಿಗದಿ ಪಡಿಸಿರುವ ಮುಂಗಡ ಯೋಜನಾ ಮೊತ್ತವು ರೂ.6.17 ಕೋಟಿ ಆಗಿರುತ್ತದೆ.

ವಿಶ್ವಬ್ಯಾಂಕಿನ ವಿತರಣಾ ಮಾರ್ಗಸೂಚಿ ಪ್ರಕಾರ ಮಧ್ಯಂತರ ಲೆಕ್ಕ ಪರಿಶೋಧನೆಯಾಗದೆ ಆರ್ಥಿಕ ವರದಿಯನ್ನು ಮೊದಲ ಮತ್ತು 2ನೇ (ತ್ರೈಮಾಸಿಕ) ವಿಶ್ವಬ್ಯಾಂಕಿಗೆ ಆರ್ಥಿಕ ವ್ಯವಹಾರಗಳ ಇಲಾಖೆ ಭಾರತ ಸರ್ಕಾರ, ನವದೆಹಲಿ ಇಲ್ಲಿಗೆ ದಿನಾಂಕ 12-08-2014 ರಂದು ಸಲ್ಲಿಸಿರುವುದಾಗಿ ತಿಳಿಸಿದರು.

ವಿಶ್ವಬ್ಯಾಂಕಿನಿಂದ ಮಂಜೂರಾತಿ ಆದೇಶ ಸಂಖ್ಯೆ: Fanan.53(2)/PF-1/2014-722, ದಿನಾಂಕ 03-09-2014 ರಂದು ಕರ್ನಾಟಕ ಸರ್ಕಾರದ ಖಜಾನೆಗೆ ನಿಗದಿ ಪಡಿಸಿದ ಲೆಕ್ಕಶೀರ್ಷಿಕೆಗೆ ರೂ.332.56 ಲಕ್ಷಗಳನ್ನು ಬಿಡುಗಡೆ ಮಾಡಿರುತ್ತಾರೆ.

ಹಣಕಾಸು ಇಲಾಖೆಯ ಈ ಹಣವನ್ನು ಪೂರಕ ಮುಂಗಡ ಪತ್ರದಲ್ಲಿ ಸೇರಿಸಿರುತ್ತಾರೆ. ಮುಂಬರುವ ಬೆಳಗಾವಿ ಅಧಿವೇಶನದಲ್ಲಿ ಮಂಡಿಸಿದ ನಂತರ ಬಿಡುಗಡೆ ಮಾಡುವುದಾಗಿ ತಿಳಿಸಿರುವುದನ್ನು ವಿವರಿಸಿದರು.

ಸದ್ಯದಲ್ಲೇ ಆಯ್ಕೆಯಾದ ಸರ್ಕಾರೇತರ ಸಂಸ್ಥೆಯೊಂದಿಗೆ ವಿಶ್ವಬ್ಯಾಂಕಿನ ನಿಯಮಾನುಸಾರದ ಪ್ರಕಾರ ಒಪ್ಪಂದಕ್ಕೆ ಸಹಿ ಮಾಡಲಾಗುವುದರ ಬಗ್ಗೆ ತಿಳಿಸಿದರು.

ಕೆಸಿಎನ್ಎಂ ಯೋಜನೆಗೆ ಕೆಳಕಂಡ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ನೇಮಕಾತಿ ಮಾಡಿಕೊಳ್ಳಲು ದಿನಾಂಕ 05-09-2014 ರಂದು ನೀಡಿದ್ದು, ವಿವರ ಕೆಳಕಂಡಂತಿದೆ.

| ಕ್ರ. ಸಂ. | ಹುದ್ದೆಯ ಹೆಸರು (ವಸೂಲಿ) | ಸಂಖ್ಯೆ |
|---|---|---|
| 1 | ಮಾನವ ಸಂಪನ್ಮೂಲ ಮತ್ತು ಸಂಗ್ರಹಣಾ ಸಲಹೆಗಾರರು | 1 |
| 2 | ಸಹಾಯಕ ಮಾನವ ಸಂಪನ್ಮೂಲ ಮತ್ತು ಸಂಗ್ರಹಣಾ ಸಲಹೆಗಾರರು | 1 |
| 3 | ಯೋಜನಾ ನಿರ್ವಹಣಾ ಸಲಹೆಗಾರರು | 1 |
| 4 | ಸಹಾಯಕ ಯೋಜನಾ ನಿರ್ವಹಣಾ ಸಲಹೆಗಾರರು | 1 |
| 5 | ಲೆಕ್ಕ ಸಹಾಯಕರು | 1 |

**ಅಭಿಯಾನ ನಿರ್ದೇಶಕರು ಮುಂದೆ ನಿರ್ವಹಿಸಬೇಕಾಗಿರುವ ಕ್ರಮಗಳ ಬಗ್ಗೆ ಕೆಳಕಂಡ ಅಂಶಗಳ ಬಗ್ಗೆ ವಿವರಿಸಿದರು.**

- ಯೋಜನಾ ಮೌಲ್ಯಮಾಪನ ಘಟಕ ಸ್ಥಾಪನೆ.
- ಹಣಕಾಸು ಇಲಾಖೆಯಿಂದ ಹಣ ಪಡೆಯಲು ಕ್ರಮ ವಹಿಸಿವುದು.

- ಸರ್ಕಾರೇತರ ಸಂಸ್ಥೆಗಳಿಂದ ಗ್ರಾಮ ಪೌಷ್ಠಕ ಸ್ವಯಂ ಸೇವಕರುಗಳನ್ನು ಆಯ್ಕೆ ಮಾಡುವುದು.
- ಮೂಲಾಧಾರಿತ ಸಮೀಕ್ಷೆ ಸ್ವಯಂ ಸೇವಾ ಗುಂಪುಗಳು/ಗ್ರಾಮ ಪೌಷ್ಠಕ ಸ್ವಯಂ ಸೇವಕರಿಗೆ ತರಬೇತಿ ಹಾಗೂ ಸಹಗಾಮಿ ಉಸ್ತುವಾರಿ ಏಜೆನ್ಸಿಯನ್ನು ಆಯ್ಕೆ ಮಾಡುವುದು.
- ಮಾಹಿತಿ ಶಿಕ್ಷಣ ಮತ್ತು ಸಂವಹನ/ಮಾಧ್ಯಮ ಕಾರ್ಯತಂತ್ರ ಚಟುವಟಿಕೆಗಳು
- ಪೌಷ್ಠಿಕತೆ ಆಹಾರ ತಯಾರಿಕಾ ಘಟಕದ ಸ್ಥಳ ಆಯ್ಕೆ ಮಾಡಬೇಕಾಗಿದೆ. ಇದು 6000 ದಿಂದ 7000ಚ.ಅ. ಪ್ರತಿ ಘಟಕಕ್ಕೆ ಇರತಕ್ಕದ್ದು.

4. **ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು** ಸ್ಥಳೀಯವಾಗಿ ಆಯ್ಕೆಯಾದ ಜನಪ್ರತಿನಿಧಿಗಳು, ಈ ಕಾರ್ಯಕ್ರಮವು ನಿಗದಿಪಡಿಸಿರುವ ತಾಲ್ಲೂಕುಗಳಲ್ಲಿ ತುರ್ತಾಗಿ ಅನುಷ್ಠಾನಗೊಳಿಸಲು ಒತ್ತಾಯ ಪಡಿಸುತ್ತಿದ್ದು, ಈ ಯೋಜನೆಯನ್ನು ಶೀಘ್ರವೇ ಪ್ರಾರಂಭಿಸಲು ಹಾಗೂ ವಿಳಂಬ ಮಾಡದೆ ಅನುಷ್ಠಾನಗೊಳಿಸಲು ತಿಳಿಸಿದರು.

ಮಾನ್ಯ ಸಚಿವರು ಈ ಯೋಜನೆಯಡಿ ಪ್ರಾರಂಭಿಕವಾಗಿ ಆಯ್ಕೆ ಮಾಡಿರುವ ತಾಲ್ಲೂಕುಗಳು ಅತ್ಯಂತ ಹಿಂದುಳಿದ ತಾಲ್ಲೂಕುಗಳಾಗಿದ್ದು, ದೇವದುರ್ಗ ತಾಲ್ಲೂಕಿನಲ್ಲಿ ನೀರಾವರಿ ಪ್ರಮಾಣ ಶೇ.60 ರಷ್ಟಿದ್ದರೂ ಸಹ ಜನರ ಮನಸ್ಥಿತಿಯನ್ನು ಬದಲಿಸಲು ಅರಿವು ಮೂಡಿಸಬೇಕಾಗಿರುವುದು ಅವಶ್ಯವಿದೆ. ತಾಲ್ಲೂಕುಗಳಲ್ಲಿ ಜನರ ರೀತಿ ನೀತಿಗಳನ್ನು ಉತ್ತಮ ರೀತಿಯಲ್ಲಿ ಉನ್ನತೀಕರಿಸಲು, ಅಂದರೆ ಶಿಕ್ಷಣ, ಹೆಣ್ಣುಮಕ್ಕಳ ವಿದ್ಯಾಭ್ಯಾಸ, ಹೆಣ್ಣು ಮಕ್ಕಳನ್ನು ನೋಡಿಕೊಳ್ಳುವ ರೀತಿ ನೈರ್ಮಲ್ಯ ಮತ್ತು ಆರೋಗ್ಯದ ಬಗ್ಗೆ ಗಮನ ಹರಿಸಲು ಜನರ ವರ್ತನೆಯಲ್ಲಿ ಬದಲಾವಣೆಯನ್ನು ತರಬೇಕಾಗಿರುತ್ತದೆ.

ಮಾನ್ಯ ಸಚಿವರು ಗದಗ ಜಿಲ್ಲೆಯ ಮಲ್ಲಸಂದ್ರ ಗ್ರಾಮದಲ್ಲಿ ಅಪೌಷ್ಠಿಕತೆ ನಿರ್ಮೂಲನೆಗೆ ತೆಗೆದುಕೊಂಡ ಅಲ್ಪಾವಧಿ ಕ್ರಮಗಳನ್ನು ತಿಳಿಸಿದರು. ಅದಕ್ಕೆ ಯೋಜನೆಯ ಸಲಹೆಗಾರರು ಹಣಕಾಸಿನ ಹಂಚಿಕೆ ಮಾಡಿದಲ್ಲಿ ಈ ಪ್ರದೇಶಕ್ಕೂ ದೀರ್ಘಕಾಲದ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬಡಜನರ ವಿಶೇಷವಾಗಿ ಮಕ್ಕಳು ಮತ್ತು ಮಹಿಳೆಯರ ಆರೋಗ್ಯ ಸುಧಾರಿಸಬಹುದು ಎಂದು ತಿಳಿಸಿದರು.

ಜಿಲ್ಲಾ ಪಂಚಾಯತ್ ಮಟ್ಟದಲ್ಲಿ ವಿವಿಧ ಇಲಾಖೆಗಳಿಂದ ಅನುಷ್ಠಾನಗೊಳ್ಳುತ್ತಿರುವ ಕಾರ್ಯಕ್ರಮಗಳೊಂದಿಗೆ ಒಗ್ಗೂಡಿಸಲು ಮಾನ್ಯ ಸಚಿವರು ಸೂಚಿಸಿದರು.

ಮೂಲಭೂತ ಸೌಕರ್ಯ, ಲಭ್ಯತೆ ಮಹಿಳಾ ಸ್ವಸಹಾಯ ಸಂಘಗಳು ಸಾಮರ್ಥ್ಯ, ಲಭ್ಯವಿರುವ ತಾಂತ್ರಿಕ ಸಿಬ್ಬಂದಿಗಳು, ಆಹಾರ ಸುರಕ್ಷತೆ ಮತ್ತು ಸ್ವಚ್ಛತೆ ಮೇಲ್ವಿಚಾರಣೆ ಇವುಗಳನ್ನು ಗಮನದಲ್ಲಿಟ್ಟುಕೊಂಡು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಸಲಹೆಗಾರರು ಹಾಗೂ ಅಭಿಯಾನ ನಿರ್ದೇಶಕರೊಂದಿಗೆ ಚರ್ಚಿಸಿದ ನಂತರ ತಾಲ್ಲೂಕು ಮಟ್ಟದಲ್ಲಿ ಎನರ್ಜಿ ಡೆನ್ಸ್ ಫುಡ್ ಉತ್ಪಾದನಾ ಘಟಕವನ್ನು ಒಂದು/ಎರಡು ಘಟಕಗಳನ್ನು ಸ್ಥಾಪಿಸುವ ಬಗ್ಗೆ ತಿಳಿಸಿದರು.

ಜೆಎಸ್‌ಡಿಎಫ್ ಪ್ರತಿನಿಧಿಗಳು ಯೋಜನೆಯ ಪ್ರಗತಿಯಲ್ಲಿ ಭಾಗವಹಿಸಲು ಆಸಕ್ತರಿರುವ ಕಾರಣ ಪ್ರಗತಿ ಪರಿಶೀಲನಾ ಸಭೆಗಳಲ್ಲಿ ಜೆಎಸ್‌ಡಿಎಫ್ ಪ್ರತಿನಿಧಿಯನ್ನು ಸಹಾ ಆಹ್ವಾನಿಸಲು ಒಪ್ಪಲಾಯಿತು.

ಉನ್ನತ ಮಟ್ಟದ ಸಭೆಯನ್ನು ಮುಕ್ತಾಯಗೊಳಿಸುವ ಮುನ್ನ ಮಾನ್ಯ ಸಚಿವರು ಯೋಜನೆ ಉದ್ಘಾಟನೆ ಶೀಘ್ರದಲ್ಲೇ ಮಾಡುವುದಾಗಿ ಸೂಚಿಸಿದರು.

ಉನ್ನತ ಮಟ್ಟದ ಸಭೆಯು ವಂದನಾರ್ಪಣೆಯೊಂದಿಗೆ ಮುಕ್ತಾಯವಾಯಿತು.

ಮಾನ್ಯ ಸಚಿವರು
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮತ್ತು
ಅಧ್ಯಕ್ಷರು, ಉನ್ನತ ಮಟ್ಟ ಸಮಿತಿ